# ಸಹಾಯಕ ಕೃಷಿ ನಿರ್ದೇಶಕರು, ಅರಕಲಗೂಡು

## 1. ಕಛೇರಿಯ ಪೂರ್ಣ ವಿವರ, ಕೆಲಸ ಹಾಗೂ ಕರ್ತವ್ಯಗಳು :-

ಸಹಾಯಕ ಕೃಷಿ ನಿರ್ದೇಶಕರು, ಅರಕಲಗೂಡು ಕಛೇರಿಯು ತಾಲ್ಲೂಕು ಮಟ್ಟದ ಕಛೇರಿಯಾಗಿದ್ದು, ಕೃಷಿ ಇಲಾಖೆಗೆ ಸೇರಿದ ಅರಕಲಗೂಡು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಎಲ್ಲಾ ಅಧೀನ ಕಛೇರಿಗಳ ನಿಯಂತ್ರಣ ಹೊಂದಿರುತ್ತಾರೆ. ತಾಲ್ಲೂಕಿನ ಕೃಷಿ ಕಾರ್ಯಕ್ರಮಗಳ ಅನುಷ್ಠಾನದ ಮೇಲು ಉಸ್ತುವಾರಿಯೂ ಈ ಕಛೇರಿ ಕರ್ತವ್ಯವಾಗಿ ರುತ್ತದೆ. ಕೃಷಿಯಲ್ಲಿ ನೂತನವಾಗಿ ಸಂಶೋದಿಸಲ್ಪಟ್ಟ ತಾಂತ್ರಿಕತೆಯನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ತಲುಪಿಸಿ ವೆಚ್ಚವನ್ನು ತಗ್ಗಿಸಿ ಉತ್ಪಾದನೆಯನ್ನು ಹೆಚ್ಚಿಸುವುದು. ತಾಲ್ಲೂಕಿನ ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಔಷಧಿಗಳನ್ನು ಮತ್ತು ಸುಧಾರಿತ ಕೃಷಿ ಉಪಕರಣಗಳನ್ನು ಒದಗಿಸಲು ಕ್ರಮ ಕೈಗ ೊಳ್ಳುವುದು ಈ ಕಛೇರಿ ಕರ್ತವ್ಯವಾಗಿರುತ್ತದೆ. ತಾಲ್ಲೂಕಿಗೆ ಸಂಬಂಧಿಸಿದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಯಕ್ರಮಗಳ ಮೇಲು ಉಸ್ತುವಾರಿಯನ್ನು ಸಹ ಈ ಕಛೇರಿಯಿಂದ ನೋಡಿಕೊಳ್ಳಲಾಗುತ್ತದೆ. ಹೋಬಳಿಯ ಮಟ್ಟದಲ್ಲಿ 5 ರೈತ ಸಂಪರ್ಕ ಕೇಂದ್ರಗಳಿದ್ದು ಸಹಾಯಕ ಕೃಷಿ ನಿರ್ದೇಶಕರ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಈ ಕಛೇರಿಯು ಜಂಟಿ ಕೃಷಿ ನಿರ್ದೇಶಕರು ಹಾಸನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಹಾಯಕ ಕೃಷಿ ನಿರ್ದೇಶಕರು, ಅರಕಲಗೂಡು ಕಛೇರಿಯು ಹಾಸನ - ಕುಶಾಲನಗರ ರಸ್ತೆಯಲ್ಲಿ ತಾಲ್ಲೂಕು ಕಛೇರಿ ಮುಂಭಾಗ ರಸ್ತೆಯಲ್ಲಿ, ಜಂಟಿ ಕೃಷಿ ನಿರ್ದೇಶಕರ ಕಛೇರಿ ಹಾಸನ ದಿಂದ 32 ಕಿ.ಮೀ. ದೂರದಲ್ಲಿರುತ್ತದೆ.

## 1. ಅಧಿಕಾರಿ ಹಾಗೂ ನೌಕರರ ಅಧಿಕಾರ ಮತ್ತು ಕರ್ತವ್ಯಗಳು :-

ಸಹಾಯಕ ಕೃಷಿ ನಿರ್ದೇಶಕರು ತಾಲ್ಲೂಕಿನ ಎಲ್ಲಾ ಅಧೀನ ಕೃಷಿ ಕಛೇರಿಗಳ ಆಡಳಿತಾತ್ಮಕ ನಿಯಂತ್ರಣಾಧಿಕಾರಿಯಾಗಿರುತ್ತಾರೆ. ಜಿಲ್ಲಾ ಮಟ್ಟದ ಕಛೇರಿಯಿಂದ ಬಿಡುಗಡೆಯಾಗುತ್ತಿರುವ ಅನುದಾನದ ಪೂರ್ಣ ಬಳಕೆ, ನಿಯಂತ್ರಣ ಹಾಗೂ ಕಾರ್ಯಕ್ರಮಗಳ ಅನುಷ್ಠಾನದ ಅಧಿಕಾರಿ ಹೊಂದಿರುತ್ತಾರೆ.

ಕೃಷಿ ಅಧಿಕಾರಿ (ವಿಷಯ ತಜ್ಞ) ಸಹಾಯಕ ಕೃಷಿ ನಿರ್ದೇಶಕರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಾರೆ. ಸಹಾಯಕ ಕೃಷಿ ನಿರ್ದೇಶಕರ ಅನುಮೋದನೆ ಮೇರೆಗೆ ಕೃಷಿ ವಿಸ್ತರಣಾ ಸಾಹಿತ್ಯ ರಚನೆ ಹಾಗೂ ರೈತರಿಗೆ ಸಲಹೆಗ ಳನ್ನು ಸಮೂಹ ಮಾಧ್ಯಮಗಳ ಮೂಲಕ ನೀಡುವುದು ತಾಲ್ಲೂಕಿನಲ್ಲಿ ಪ್ರವಾಸ ಕೈಗೊಂಡ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಹಾಗೂ ಕೃಷಿ ಸಹಾಯಕರಿಗೆ ತಾಂತ್ರಿಕ ಮಾರ್ಗದರ್ಶನ ನೀಡುವುದಲ್ಲದೆ ರೈತರ ಹೊಲಗಳಿಗೆ ಭೇಟಿ ನೀಡಿ ಸಲಹೆ ಸೂಚನೆ ನೀಡುತ್ತಾರೆ. ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಪರಿವೀಕ್ಷಕರಾಗಿ ಕೆಲಸ ನಿರ್ವಹಿಸುತ್ತಾರೆ.

ಕೃಷಿ ಅಧಿಕಾರಿ (ತಾಂತ್ರಿಕ) ಸಹಾಯಕ ಕೃಷಿ ನಿರ್ದೇಶಕರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಾರೆ. ಜಂಟಿ ಕೃಷಿ ನಿರ್ದೇಶಕರ ಕಛೇರಿ ಹಾಗೂ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಬೇಕಾದ ಪ್ರಗತಿ ವರದಿಗಳ ತಯಾರಿಕೆ, ಸಭೆಗಳ ಪಾಲನಾ ವರದಿ, ತಾಲ್ಲೂಕು ಕಾರ್ಯಕ್ರಮಗಳನ್ನು ರೈತ ಸಂಪರ್ಕ ಕೇಂದ್ರವಾರು ಹಂಚಿಕೆ, ಅನುಷ್ಠಾನ ಮತ್ತು ಸಾಧನಗಳ ಕಾರ್ಯಕ್ರಮಗ ಳನ್ನು ನಿರ್ವಹಿಸುವುದು. ಗುಣಮಟ್ಟ ನಿಯಂತ್ರಣ ಕಾಯಿದೆಯಡಿ ಪರವಾನಗಿ ನೀಡಿಕೆ ಕಾರ್ಯವನ್ನು ತಾಂತ್ರಿಕ ಸಹಾಯಕರು ನಿರ್ವಹಿಸುತ್ತಾರೆ.

ಕೃಷಿ ಅಧಿಕಾರಿ (ರೈತ ಮಹಿಳೆ) ರವರ ಕರ್ತವ್ಯದ ಸಂಕ್ಷಿಪ್ತ ವಿವರಗಳನ್ನು ರೈತ ಮಹಿಳೆಯೊಂದಿಗೆ ಆಧುನಿಕ ಕೃಷಿ ತಂತ್ರಜ್ಞಾನಗಳ ಬಗ್ಗೆ ತರಬೇತಿ, ಮಾಹಿತಿ ನೀಡುವುದು ಹಾಗೂ ಕೃಷಿ ಸಂಬಂಧಿತ ಗೃಹ ಕೈಗಾರಿಕೆಗಳ ಬಗ್ಗೆ ಉತ್ತೇಜನ ನೀಡುವುದು. ಗುಂಪುಗಳನ್ನು ರಚಿಸಿ, ಇಲಾಖಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕಾರ್ಯ ಕೈಗೊಳ್ಳುವುದು. ಬೀಜ ಸುತ್ತು ನಿಧಿ ವಿತರಿಸಿ ಆ ಗುಂಪುಗಳು ಆರ್ಥಿಕ ಅಬಿವೃದ್ಧಿ ಸಾಧಿಸುವಲ್ಲಿ ನೆರವಾಗುವುದು, ರೈತ ಮಹಿಳೆಯರನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರಕ್ಕೆ ತರಬೇತಿಗೆ ನಿಯೋಜಿಸುವುದು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸುವುದು. ಮೇಲಾಧಿಕಾರಿಗಳು ಕಾಲ ಕಾಲಕ್ಕೆ ವಹಿಸುವ ಇನ್ನು ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದು.

ಅಧೀಕ್ಷಕರು ಆಡಳಿತ ಶಾಖೆಯ ಲಿಪಿಕ ವರ್ಗದ ನೌಕರರ ಕೆಲಸ ಕಾರ್ಯಗಳ ಮೇಲು ಉಸ್ತುವಾರಿ ಹಾಗೂ ಮುಖ್ಯ ಕಡತಗಳ ನಿರ್ವಹಣೆ ಕೆಲಸ ನಿರ್ವಹಿಸುತ್ತಾರೆ.

ಪ್ರಥಮ ದರ್ಜೆ ಸಹಾಯಕರು ಸೇವಾ ವಹಿಗಳ ನಿರ್ವಹಣೆ, ರಜೆ ಮಂಜೂರಾತಿ, ಸಿಬ್ಬಂದಿಗಳ ಬಡ್ತಿ, ವಾರ್ಷಿಕ ಬಡ್ತಿ, ಶಿಸ್ತು ಪ್ರಕರಣ ಇನ್ನಿತರ ಆಡಳಿತಾತ್ಮಕ ಕಡತಗಳ ನಿರ್ವಹಣೆ ಕೆಲಸ ನಿರ್ವಹಿಸುತ್ತಾರೆ.

ದ್ವಿತೀಯ ದರ್ಜೆ ಸಹಾಯಕರು ಬಿಲ್ಲುಗಳ ಮೇಲುಸಹಿ, ವೇತನ ಹಾಗೂ ಪ್ರಯಾಣ ಭತ್ಯೆ ಬಿಲ್ಲು ತಯಾರಿ, ವಿವಿಧ ಬಿಲ್ಲುಗಳು ಮಂಜೂರಾತಿಗೆ ಸಂಬಂಧಿಸಿದ ಕಡತ, ನಿರ್ವಹಣೆ ಅಲ್ಲದೆ ಕಛೇರಿಗೆ ಬಂದ ಪತ್ರಗಳ ನೋಂದಣಿ, ರವಾನೆ, ವಾಹ ನಿರ್ವಹಣೆ, ಕಟ್ಟಡಗಳು, ದುರಸ್ತಿ ನಿರ್ವಹಣೆ, ತರಬೇತಿ ಭತ್ಯೆ, ನಗದು ಇನ್ನಿತರೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಸ.ಕೃ.ನಿ. ಅರಕಲಗೂಡು

ಬೆರಳಚ್ಚುಗಾರರು ಕಛೇರಿಗೆ ಸಂಬಂಧಿಸಿದ ಎಲ್ಲಾ ವಿಭಾಗಗಳ ಬೆರಳಚ್ಚು ಕೆಲಸ ಹಾಗೂ ಗಣಕ ಯಂತ್ರದ ಕೆಲಸಗಳನ್ನು ನಿರ್ವಹಿಸುತ್ತಾರೆ.

ವಾಹನ ಚಾಲಕರು ಅಧಿಕಾರಿಗಳ ಪ್ರವಾಸ ಕಾರ್ಯದಲ್ಲಿ ವಾಹನ ಚಾಲನೆ, ವಾಹನ ನಿರ್ವಹಣೆ ಕೆಲಸ ನಿರ್ವಹಿಸುತ್ತಾರೆ.

ಗ್ರೂಪ್ ಡಿ ನೌಕರರು ಕಛೇರಿ ಶುಚಿತ್ವ, ಟಪಾಲುಗಳ ರವಾನೆ, ಖಜಾನೆ ಬ್ಯಾಂಕ್‌ಗಳಲ್ಲಿ ಕಛೇರಿಗೆ ಸಂಬಂಧಿಸಿದ ಕೆಲಸ ನಿರ್ವಹಿಸುತ್ತಾರೆ.

ರೈತ ಸಂಪರ್ಕ ಕೇಂದ್ರಗಳು ಹೋಬಳಿ ಮಟ್ಟದ ಕಛೇರಿಗಳಾಗಿದ್ದು, ತಾಲ್ಲೂಕು ಮಟ್ಟದ ಸಹಾಯಕ ಕೃಷಿ ನಿರ್ದೇಶಕರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಕೇಂದ್ರಗಳಲ್ಲಿ ಕೃಷಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

## 2. ಅಧಿಕಾರಿ ಹಾಗೂ ನೌಕರರ ಅಧಿಕಾರ ಮತ್ತು ಕರ್ತವ್ಯಗಳು :-

### 1. ಕೃಷಿ ಅಧಿಕಾರಿಗಳ ಕರ್ತವ್ಯಗಳು :-

ಕೃಷಿ ಅಧಿಕಾರಿಯು ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥ. ಕೇಂದ್ರದ ವ್ಯವಸ್ಥಿತ ಕಾರ್ಯ ನಿರ್ವಹಣೆ ಹಾಗೂ ಕೇಂದ್ರದ ಅಧೀನದ ಸಿಬ್ಬಂದಿಯ ಮಾರ್ಗದರ್ಶನ ಮೇಲ್ವಿಚಾರಣೆ ಹಾಗೂ ನಿಯಂತ್ರಣ ಕೃಷಿ ಅಧಿಕಾರಿಯ ಮುಖ್ಯ ಜವಾಬ್ದಾರಿಯಾಗಿರುತ್ತದೆ. ರೈತ ಸಂಪರ್ಕ ಕೇಂದ್ರದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಈಡೇರಿಸಲು ತನ್ನ ವ್ಯಾಪ್ತಿಗೆ ಸೇರುವ ಎಲ್ಲಾ ಸಂಪನ್ಮೂಲಗಳನ್ನು ಬಳಸುವುದು. ಸಮೃದ್ಧಿಗೊಳಿಸುವುದು ಹಾಗೂ ಉಳಿಸಿಕೊಳ್ಳುವುದು ಇವರ ಹೊಣೆಗಾರಿಕೆ ಯಾಗಿರುತ್ತದೆ. ಕಾಲ ಕಾಲಕ್ಕೆ ನೀಡಲಾಗುವ ಆದೇಶ, ಮಾರ್ಗಸೂಚಿ, ಸುತ್ತೋಲೆ ಹಾಗೂ ಪತ್ರಗಳ ಅನ್ವಯ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಸಮೀಪದ ಕೃಷಿ ಸಂಶೋಧನಾ ಕೇಂದ್ರದ ಸಂಪರ್ಕವನ್ನಿರಿಸಿಕೊಂಡು ಸುಧಾರಿತ ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕ್ಷತೆ ಮತ್ತು ಟ್ರಯಲ್ಸ್ ಕಾರ್ಯಕ್ರಮ ರೂಪಿಸುವುದು. ರೈತ ಸಂಪರ್ಕ ಕೇಂದ್ರವನ್ನು ಕೃಷಿ ಹಾಗೂ ಕೃಷಿ ಸಂಬಂಧಿತ ಉತ್ಪಾದನಾ ಚಟುವಟಿಕೆಗಳ ಮಾಹಿತಿ, ಚರ್ಚೆ ಹಾಗೂ ಸಮಸ್ಯೆಗಳ ಪರಿಹಾರ ಕೇಂದ್ರಗಳಾಗಿ ಅಬಿವೃದ್ದಿಗೊಳಿಸುವುದು. ಒಕ್ಕಣೆ ನಂತರದ ತಾಂತ್ರಿಕತೆಯ ಬಗ್ಗೆ ಸಲಹೆ ಮಾರ್ಗದರ್ಶನ ನೀಡುವುದು. ನಿಯಂತ್ರಣಾಧಿಕಾರಿಯಾದ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಗೊತ್ತುಪಡಿಸುವ ಮಾರ್ಗದರ್ಶನ / ಗುರಿ ಪ್ರಕಾರ ಇಲಾಖೆಯ ಕಾರ್ಯ ಕ್ರಮಗಳನ್ನು ಕಾರ್ಯಗತಗೊಳಿಸುವುದು ಮತ್ತು ಮೇಲಾಧಿಕಾರಿಗೆ ಕಾಲ ಕಾಲಕ್ಕೆ ಕೇಳುವ ಮಾಹಿತಿ / ವರದಿ ಸಲ್ಲಿಸುವುದು. ಕೃಷಿ ಪರಿಕರ ಸರಬರಾಜು ಸಂಸ್ಥೆ ಹಾಗೂ ಹಣಕಾಸಿನ ಸಂಸ್ಥೆಗಳನ್ನು ಸಂಪರ್ಕದಲ್ಲಿಟ್ಟುಕೊಂಡು ದಾಸ್ತಾನು ವಿವರ, ಧಾರಣೆ ವ್ಯವಹಾರ ವಿಧಾನಗಳ ಬಗ್ಗೆ ಸಹಾಯಕ ಕೃಷಿ ನಿರ್ದೇಶಕರಿಗೆ ಮಾಹಿತಿ ಒದಗಿಸುವುದು ಹಾಗೂ ಕ್ಷೇತ್ರ ಸಿಬ್ಬಂದಿಗೆ ಮಾರ್ಗದರ್ಶನ ನೀಡುವುದು. ಕಾನೂನು ನಿಯಮ ಹಾಗೂ ಆದೇಶಗಳನ್ವಯ ದತ್ತ ಅಧಿಕಾರಗಳನ್ನು ಚಲಾಯಿಸುವುದು ಹಾಗೂ ಮೇಲಾಧಿಕಾರಿಗಳಿಗೆ ನೀಡಲಾದ ಈ ಅಧಿಕಾರವನ್ನು ಚಲಾಯಿಸಲು ನೆರವಾಗುವುದು. ಮೇಲಾಧಿಕಾರಿಗಳು ಕಾಲ ಕಾಲಕ್ಕೆ ವಹಿಸುವ ಇನ್ನು ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದು.

### 2. ಸಹಾಯಕ ಕೃಷಿ ಅಧಿಕಾರಿ ಕರ್ತವ್ಯಗಳು :-

ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಕೃಷಿ ಸಹಾಯಕರ (ಗ್ರಾಮ ವಿಸ್ತರಣಾ ಕಾರ್ಯಕರ್ತ) ಕಾರ್ಯ ಸೂಚಿಯಲ್ಲಿ ಪಟ್ಟಿ ಮಾಡಲಾಗಿರುವ ಎಲ್ಲಾ ಕರ್ತವ್ಯಗಳ ನೇರ ಹೊಣೆಗಾರಿಕೆಯು ಸಹಾಯಕ ಕೃಷಿ ಅಧಿಕಾರಿಯದಾಗಿರುತ್ತದೆ. ಕ್ಷೇತ್ರ ಮಟ್ಟದ ಎರಡನೇ ಹಂತದ ಕಾರ್ಯಕರ್ತನಾದ ಈತನ ಪ್ರಮುಖ ಹೊಣೆಗಾ ರಿ ಕೆಯು ವಿವಿಧ ಸಂಸ್ಥೆಗಳಾದ ಸೇವಾ ಸಹಕಾರ ಸಂಘಗಳು, ಆಗ್ರೋ ಕೇಂದ್ರಗಳು ಮತ್ತು ಖಾಸಗಿ ವಿತರಕರ ಮೂಲಕ ಕೃಷಿ ಪರಿಕರಗಳನ್ನು ಸಂಗ್ರಹಿಸುವುದು ಮತ್ತು ಇವುಗಳಿಂದ ರೈತರಿಗೆ ಸಕಾಲದಲ್ಲಿ ಸಾಕಷ್ಟು ಹತ್ತಿರದಲ್ಲಿ ಈ ಪರಿಕರಗಳು ದೊರಕುವಂತೆ ವ್ಯವಸ್ಥೆ ಮಾಡುವುದಾಗಿರುತ್ತದೆ. ಈತನು ಗ್ರಾಮ ಪಂಚಾಯಿತಿಗಳೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು ಕರ್ತವ್ಯ ನಿರ್ವಹಿಸಬೇಕು. ಗ್ರಾಮ ಪಂಚಾಯಿತಿಗಳು ರೂಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗ ೊಳಿಸಬೇಕು. ಗ್ರಾಮ ಪಂಚಾಯಿತಿಗಳ ಸಭೆಯಲ್ಲಿ ಭಾಗವಹಿಸಿ ಇಲಾಖಾ ಕಾರ್ಯಕ್ರಮಗಳನ್ನು ಪ್ರಚಾರಗ ೊಳಿಸಬೇಕು. ಇಲಾಖೆಯ ಕಾರ್ಯಕ್ರಮಗಳ ಅಳವಡಿಕೆಯಾದ ಪ್ರಗತಿ, ಹವಾಮಾನ, ಬೆಳೆ ಸ್ಥಿತಿ ಮತ್ತು ಮಳೆ ವಿವರದ ಬಗ ್ಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ಮಾಹಿತಿ ನೀಡಬೇಕು. ಕೃಷಿ ಸಹಾಯಕರೊಂದಿಗೆ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಕ್ಷೇತ್ರೋತ್ಸವಗಳನ್ನು ಏರ್ಪಡಿಸಬೇಕು. ರೈತರು ನೀಡುವ ಬೀಜ ಮಾದರಿಗಳ ಮೊಳಕೆ ಪರೀಕ್ಷೆಯನ್ನು ಕೈಗೊಂಡು ಫಲಿತಾಂಶವನ್ನು ನೀಡಬೇಕು. ಕೃಷಿ ಇಲಾಖೆಯು ವಹಿಸುವ ಇನ್ನು ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಬೇಕು.

### 3. ಕೃಷಿ ಸಹಾಯಕರ ಕರ್ತವ್ಯಗಳು :-

ಕೃಷಿ ಸಹಾಯಕರು ತನ್ನ ಕಾರ್ಯವ್ಯಾಪ್ತಿಯ ಪ್ರತಿಯೊಬ್ಬ ರೈತರ ಸ್ನೇಹಿತ, ತತ್ವ ಬೋಧಕ ಮತ್ತು ಮಾಗ ್ದರ್ಶಿ, ಇದನ್ನು ಪ್ರಮುಖ ಹೊಣೆಗಾರಿಕೆಯು ಬೆಳೆ ಉತ್ಪಾದನೆ ಮತ್ತು ಕೃಷಿ ವ್ಯಾಪ್ತಿಗೆ ಒಳಪಡುವ ವಿಷಯ ಗಳಿಗೆ ಸಂಬಂಧ ಪಟ್ಟಂತೆ, ರೈತರಿಗೆ ತಂತ್ರಜ್ಞಾನ ವರ್ಗಾವಣೆ ಮಾಡಬೇಕು. ಈತನು ರೈತರ ಹಿಡುವಳಿವಾರು ಮತ್ತು ವಗ ್ವಾರು (ಪರಿಶಿಷ್ಟ ಜಾತಿ / ಪಂಗಡ) ಸಣ್ಣ ಮತ್ತು ಅತಿ ಸಣ್ಣ ರೈತರ ವಿವರಗಳನ್ನು ತಯಾರಿಸಬೇಕು. ತನ್ನ ಕಾರ್ಯವ್ಯಾಪ್ತಿಯ ನಕ್ಷೆಯೊಂದನ್ನು ತಯಾರಿಸಿಕೊಳ್ಳಬೇಕು ಈ ನಕ್ಷೆಯಲ್ಲಿ ತನ್ನ ಕಾರ್ಯ ವ್ಯಾಪ್ತಿಯನ್ನವದಲ್ಲಿರುವ ಗ ್ರಾಮಗಳು, ಕೂಡು ರಸ್ತೆಗಳು, ಕೃಷಿ ಉದ್ದಿಮೆಗೆ ಸಂಬಮಧಿಸಿದ ಇತರ ಅಂಶಗಳಾದ ಸೇವಾ ಸಹಕಾರ ಸಂಘ, ವಾಣಿಜ್ಯ ಬ್ಯಾಂಕುಗಳ ಶಾಖೆಗಳು, ಕೃಷಿ ಸಾಮಗ್ರಿಗಳ ಮಾರಾಟ ಕೇಂದ್ರಗಳು ಇತ್ಯಾದಿಗಳನ್ನು ನಮೂದಿಸಬೇಕು. ರೈತ ಸಂಪರ್ಕ ಕೇಂದ್ರದಲ್ಲಿ ಲಭ್ಯವಿರುವ ಕೃಷಿಗೆ ಸಂಬಂಧಪಟ್ಟ ಎಲ್ಲಾ ಪರಿಕರಗಳನ್ನು ರೈತರಿಗೆ ಮಾರಾಟ ಮಾಡಿ ಬಂದ ಹಣವನ್ನು ಸಂಬಂಧಪಟ್ಟ ಸಂಸ್ಥೆಗೆ ಜಮಾ ಮಾಡುವುದು ಇವರ ಮುಖ್ಯ ಹೊಣೆಯಾಗಿರುತ್ತದೆ. ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಯವರು ವಹಿಸುವ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

# ನಿರ್ಣಯ ಕೈಗೊಳ್ಳುವ ಕಛೇರಿಯಲ್ಲಿ ಅನುಸರಿಸುತ್ತಿರುವ ವಿಧಿವಿಧಾನಗಳ, ವಿವಿಧ ಹಂತಗಳು , ಹಾಗೂ ಹೊಣೆಗಾರಿಕೆ.

ಆಡಳಿತ ಹಾಗೂ ಲೆಕ್ಕ ಪತ್ರಗಳ ವಿಷಯದಲ್ಲಿ ವಿಷಯ ನಿರ್ವಾಹಕರು ಸಂಬಂಧಿಸಿದ ನಿಯಮ ಸರ್ಕಾರಿ ಆದೇಶ, ಸುತ್ತೋಲೆ ಇಲಾಖೆ ನಿರ್ದೇಶನಗಳ ಮಾಹಿತಿಯೊಂದಿಗೆ ಟಿಪ್ಪಣಿ ತಯಾರಿಸಿ, ಅಧೀಕ್ಷಕರಿಗೆ ಸಲ್ಲಿಸುವರು. ಅಧೀಕ್ಷಕರು ತಮ್ಮ ಅಬಿಪ್ರಾಯ ಸೂಚಿಸಿ ಕಡತದಲ್ಲಿ ಟಿಪ್ಪಣಿ ಬರೆದು, ಅಧಿಕಾರಿಗಳಿಗೆ ಸಲ್ಲಿಸುವರು. ಅಧಿಕಾರಿಗಳು ತಮ್ಮ ಅಭಿಪ್ರಾಯ ಸೂಚಿಸಿ ಕಡತದಲ್ಲಿ ಟಿಪ್ಪಣಿ ತಮ್ಮ ನಿರ್ಣಯಗಳನ್ನು ದಾಖಲಿಸುವರು ಮತ್ತು ಸಂಬಂಧಪಟ್ಟ ವಿಭಾಗಕ್ಕೆ ಹಿಂದಿರುಗಿಸುತ್ತಾರೆ. ಸಹಾಯಕ ಕೃಷಿ ನಿರ್ದೇಶಕರು ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ವಿಷಯ ನಿರ್ವಾಹಕರು, ತಾಂತ್ರಿಕ ಸಹಾಯಕರು, ಅಧೀಕ್ಷಕರು ಇವರಿಗೆ ಸಹಾಯಕ ಕೃಷಿ ನಿರ್ದೇಶಕರು ಹೊಣೆಗಾರಿಕೆಯನ್ನು ವಹಿಸಿರುತ್ತಾರೆ.

ಸ.ಕೃ.ನಿ. ಅರಕಲಗೂಡು

# ಕಾರ್ಯಕ್ರಮ ಅನುಷ್ಠಾನದ ಬಗ್ಗೆ

ಎಲ್ಲಾ ನಿಯಮಗಳ ಪಾಲನೆಯ ನಂತರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

ಸ.ಕೃ.ನಿ. ಅರಕಲಗೂಡು

# ಕಛೇರಿಯಲ್ಲಿ ಕೆಲಸ ನಿರ್ವಹಿಸುವಲ್ಲಿ ಅನುಸರಿಸಲಾಗುತ್ತಿರುವ ನಿಯಮಗಳು, ನಿರ್ದೇಶನ ಮತ್ತು ಆದೇಶಗಳು.

1. 1957 ರ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು
2. ಕರ್ನಾಟಕ ಆರ್ಥಿಕ ಸಂಹಿತೆ
3. 1958 ರ ಸಾದಿಲ್ವಾರು ಕೈಪಿಡಿ
4. 1957 ರ ಕರ್ನಾಟಕ ನಾಗರೀಕ ಸೇವಾ(ನಿಯಂತ್ರಣ. ವರ್ಗೀಕರಣ, ಮತ್ತು ಮೇಲ್ಮನವಿ) ನಿಯಮಗಳು.
5. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು.
6. ಖಜಾನೆ ಸಂಹಿತೆ
7. ಬಜೆಟ್ ಮ್ಯಾನುಯಲ್
8. ಕೀಟನಾಶಕ ಅಧಿನಿಯಮ 1966
9. ರಸಗೊಬ್ಬರ ನಿಯಂತ್ರಣ ಅಧಿನಿಯಮ 1985
10. ಬೀಜ ನಿಯಂತ್ರಣ ಅಧಿನಿಯಮ 1983
11. ಸರ್ಕಾರದ ಆದೇಶಗಳು ಹಾಗೂ ಸುತ್ತೋಲೆಗಳು
12. ಇಲಾಖಾ ಆದೇಶಗಳು
13. ಹಾಸನ ಜಿಲ್ಲಾ ಪಂಚಾಯತ್ ಆದೇಶಗಳು
14. ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಧಿನಿಯಮ 1993.

ಸ.ಕೃ.ನಿ. ಅರಕಲಗೂಡು

## ಕಛೇರಿಯು ತನ್ನ ಅಧೀನದಲ್ಲಿ ಹೊ ದಿರತಕ್ಕಂತಹ ದಾಖಲಾತಿ ವಿವರ.

ಹಾಜರಾತಿ ಪುಸ್ತಕ, ಸೇವಾಪುಸ್ತಕ, ಸಾಂದರ್ಭಿಕ ರಜೆ ಪುಸ್ತಕ, ನಗದು ಪುಸ್ತಕ, ವೇತನ ಹಾಗೂ ಪ್ರವಾಸ ಭತ್ಯೆಯ ಬಟವಾಡೆ ಪುಸ್ತಕ, ಟ್ರೆಜರಿ ಟೋಕನ್ ರಿಜಿಸ್ಟರ್, ಲೆಕ್ಕ ಪತ್ರ ವಹಿಗಳ, ಚಲನವಲನ ವಹಿ, ದಾಸ್ತಾನು ಪುಸ್ತಕ, ಲಾಗ್ ಪುಸ್ತಕ, ದಿನಪತ್ರಿಕೆ ವಹಿ.

## ನಿರ್ಣಯ ಕೈಗೊಳ್ಳುವಲ್ಲಿ ಹಾಗೂ ಯೋಜನೆಗಳ ನಿರ್ವಹಣೆಯಲ್ಲಿ ಸಾರ್ವಜನಿಕ ಸಹಭಾಗಿತ್ವ :-

ಸಹಾಯಕ ಕೃಷಿ ನಿರ್ದೇಶಕರ ಮಾರ್ಗದರ್ಶನದಲ್ಲಿ ಜಿಲ್ಲಾ ಪಂಚಾಯತ್ ಹಾಸನ, ಜಂಟಿ ಕೃಷಿ ನಿರ್ದೇಶಕರು, ಹಾಸನ ಹಾಗೂ ಇಲಾಖಾ ನಿರ್ದೇಶನ ಮತ್ತು ಆದೇಶಗಳ ಪ್ರಕಾರ ಈ ಕಛೇರಿಯು ಕಾರ್ಯನಿರ್ವಹಿಸುತ್ತದೆ.

# ಸ್ಥಳೀಯ ಸಲಹಾ ಸಮಿತಿಗಳ ಬಗ್ಗೆ

**1) ರೈತರ ಆತ್ಮಹತ್ಯೆ ಪರಿಹಾರ ಸಮಿತಿ : -**

ಉಪವಿಭಾಗಾಧಿಕಾರಿಗಳು, ಸಕಲೇಪುರ ಉಪ ವಿಭಾಗ, ಇವರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ತಾಲ್ಲೂಕು ತಹಸೀಲ್ದಾರ್, ಆರಕ್ಷಕ ವೃತ್ತ ನಿರೀಕ್ಷಕರು ಹಾಗೂ ಸಹಕಾರ ಇಲಾಖೆಯ ಸಹಾಯಕ ನೊಂದಣಾಧಿಕಾರಿಗಳು, ಇವರುಗಳು ಸದಸ್ಯರಾಗಿದ್ದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಸಾಲದ ಬಾಧೆ ಮತ್ತು ಬೆಳೆ ನಷ್ಟದಿಂದ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ರೂ. 100000/- ಪರಿಹಾರ ನೀಡಬಹುದಾಗಿದ್ದು ಇಂತಹ ರೈತರು ಯಾವುದಾದರೂ ಸಹಕಾರಿ / ವಾಣಿಜ್ಯ ಬ್ಯಾಂಕುಗಳಲ್ಲಿ ಬೆಳೆ ಸಾಲ ಪಡೆದು ಸುಸ್ಥಿದಾರರಾಗಿದ್ದು, ಸಂಬಂಧಪಟ್ಟ ಸಂಸ್ಥೆಯಿಂದ ಸಾಲ ಹಿಂದಿರುಗಿಸಲು ತಗಾದೆ ನೋಟೀಸ್ ಜಾರಿಯಾಗಿರುವವರು ಈ ಪರಿಹಾರಕ್ಕೆ ಅರ್ಹರಾಗಿರುತ್ತಾರೆ.

ಆತ್ಮಹತ್ಯೆ ಮಾಡಿಕೊಂಡ ರೈತನ ಎಲ್ಲಾ ವಿವರಗಳನ್ನು ಪಡೆದು ಸಮಿತಿಯ ಮುಂದೆ ಮಂಡಿಸಿ ಸಮಿತಿಯು ಕೈಗೊಂಡ ತೀರ್ಮಾನದಂತೆ ಪರಿಹಾರ ನೀಡುವ ಅಥವಾ ತಿರಸ್ಕರಿಸುವ ಜವಬ್ದಾರಿಯನ್ನು ಈ ಸಮಿತಿಯು ಹೊಂದಿರುತ್ತದೆ.

ಮುಂದುವರೆದಿದೆ.,

**2) ತಾಲ್ಲೂಕು ಮಟ್ಟದ ಆತ್ಮ ಅನುಷ್ಠಾನ ಸಮಿತಿ :-**

ಜಿಲ್ಲಾಮಟ್ಟದ ಆತ್ಮ ಚಾಲನಾ ಸಮಿತಿಯಲ್ಲಿ ಕೈಗೊಂಡ ನಿರ್ಣಯಗಳನ್ನು ತಾಲ್ಲೂಕು ಮಟ್ಟದ ಆತ್ಮ ಅನುಷ್ಠಾನ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು. ಕೃಷಿ ಮತ್ತು ಕೃಷಿ ಸಂಬಂಧಿತ ಇಲಾಖೆಗಳ ಮುಖಾಂತರ ಆತ್ಮ ಯೋಜನೆಯ ಅನುಷ್ಠಾನವನ್ನು ತಾಲ್ಲೂಕು ಮಟ್ಟದಲ್ಲಿ ಕೈಗೊಳ್ಳಲು ಸಹಕರಿಸುವುದು. ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಯಾವುದಾದರೂ ಹೊಸ ತಾಂತ್ರಿಕತೆಯ ಬಗ್ಗೆ ಕಾರ್ಯಕ್ರಮದ ಅನುಷ್ಠಾನದ ಅವಶ್ಯಕತೆ ಇದ್ದಲ್ಲಿ ಜಿಲ್ಲಾ ಮಟ್ಟದ ಚಾಲನಾ ಸಮಿತಿಗೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯುವುದು. ತಾಲ್ಲೂಕು ಮಟ್ಟದಲ್ಲಿ ವಿಸ್ತರಣಾ ಚಟುವಟಿಕೆಗಳ ಬಗ್ಗೆ ಕ್ರಿಯಾ ಯೋಜನೆ ೦ತಯಾರಿಸಿ ಅನುಮೋದನೆಗೆ ಜಿಲ್ಲಾ ಚಾಲನಾ ಸಮಿತಿಗೆ ಸಲ್ಲಿಸುವುದು.

## ಸಮಿತಿಯ ವಿವರ

| ಕ್ರ.ಸಂ. | ಹುದ್ದೆ | ಷರಾ |
|---|---|---|
| 1 | ಅಧ್ಯಕ್ಷರು, ತಾಲ್ಲೂಕು ಪಂಚಾಯತ್ | ಅಧ್ಯಕ್ಷರು |
| 2 | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ | ಕಾರ್ಯಾಧ್ಯಕ್ಷರು |
| 3 | ರೈತ ಪ್ರತಿನಿಧಿ (ಪ.ಜಾ) | ಸದಸ್ಯರು |
| 4 | ಮಹಿಳಾ ರೈತ ಪ್ರತಿನಿಧಿ | ಸದಸ್ಯರು |
| 5 | ಯುವ ರೈತ ಪ್ರತಿನಿಧಿ | ಸದಸ್ಯರು |
| 6 | ಮಹಿಳಾ ರೈತ ಪ್ರತಿನಿಧಿ (ಪ.ಜಾ) | ಸದಸ್ಯರು |
| 7 | ಸಮೂಹ ರೈತ ಪ್ರತಿನಿಧಿ | ಸದಸ್ಯರು |
| 8 | ಕೃಷಿ ಪರಿಕರ ಮಾರಾಟಗಾರರು | ಸದಸ್ಯರು |
| 9 | ಅಧ್ಯಕ್ಷರು, ಕೃಷಿ ಸ್ಥಾಯಿ ಸಮಿತಿ, ತಾಲ್ಲೂಕು ಪಂಚಾಯತ್ | ಸದಸ್ಯರು |
| 10 | ಸಹಾಯಕ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |
| 11 | ಸಹಾಯಕ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ | ಸದಸ್ಯರು |
| 12 | ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕರು | ಸದಸ್ಯರು |
| 13 | ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ | ಸದಸ್ಯರು |
| 14 | ಕೃಷಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| 15 | ಸಹಾಯಕ ನಿರ್ದೇಸಕರು, ರೇಷ್ಮೆ ಇಲಾಖೆ | ಸದಸ್ಯರು |
| 16 | ಕೃಷಿ ಮಾರುಕಟ್ಟೆ ಇಲಾಖೆ ಪ್ರತಿನಿಧಿ | ಸದಸ್ಯರು |
| 17 | ಸಹಕಾರ ಇಲಾಖೆ ಪ್ರತಿನಿಧಿ | ಸದಸ್ಯರು |
| 18 | ಆಯ್ದ ಮೂರು ಗ್ರಾಮ ಪಂಚಾಯ್ತಿಗಳ ಅಧ್ಯಕ್ಷರುಗಳು | ಸದಸ್ಯರು |

# ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಂಬಂಧಿಸಿದಂತೆ ಅಂತಹ ಬೋರ್ಡ್ಸ್, ಕೌನ್ಸಿಲ್ ಮತ್ತು ಕಮಿಟಿಗಳು

ಯಾವುದೇ ಬೋರ್ಡ್ಸ್, ಕೌನ್ಸಿಲ್ ಮತ್ತು ಕಮಿಟಿಗಳು ಇರುವುದಿಲ್ಲ.

ಸ.ಕೃ.ನಿ. ಅರಕಲಗೂಡು

## ತಾಲ್ಲೂಕು ಮಟ್ಟದ ಕಛೇರಿಯಾದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕಾರ್ಯನಿರತರಾಗಿರುವ ಅಧಿಕಾರಿ / ನೌಕರರ ತ:ಖ್ತೆ

| ಕ್ರ.ಸಂ. | ಹುದ್ದೆ | ಹೆಸರು (ಶ್ರೀಯುತರು / ಶ್ರೀಮತಿ) |
|---|---|---|
| 1. | ಸಹಾಯಕ ಕೃಷಿ ನಿರ್ದೇಶಕರು-1 | ಕೆ.ಆರ್. ಶ್ರೀವಾಸ್ |
| 2. | ಕೃಷಿ ಅಧಿಕಾರಿಗಳು - 2 | ಖಾಲಿ |
| | | ಖಾಲಿ |
| 3. | ಅಧೀಕ್ಷಕರು - 1 | ಐ.ಎ. ಇಂದಿರಾಮಣಿ |
| 4. | ಪ್ರಥಮ ದರ್ಜೆ ಸಹಾಯಕರು - 1 | ಬಿ.ಆರ್. ಮಂಜುನಾಥ್ |
| 5. | ದ್ವಿತೀಯ ದರ್ಜೆ ಸಹಾಯಕರು - 2 | ಸುಧಾ |
| | | ಎನ್.ಎಂ. ಮಂಜುನಾಥ |
| 6. | ಬೆರಳಚ್ಚುಗಾರರು - 1 | ದಾಕ್ಷಾಯಿಣಿ |
| 7. | ವಾಹನಚಾಲರಕರು - 1 | ಮಹಮ್ಮದ್ ಇಸ್ಮಾಯಿಲ್ |
| 8. | ಗ್ರೂಪ್ ಡಿ ನೌಕರರು - 3 | ಜೆ.ಬಿ. ರಂಗಸ್ವಾಮಿ |
| | | ಎಂ.ಆರ್. ರಾಮಚಂದ್ರ |
| | | ಸಣ್ಣಮ್ಮ |

ಮುಂದುವರೆದಿದೆ.,

ಸ.ಕೃ.ನಿ. ಅರಕಲಗೂಡು

ಮಾಹಿತಿ ಹಕ್ಕು ಅಧಿನಿಯಮ 2010-11, ಹಾಸನ ವಿಭಾಗ

## ಸಹಾಯಕ ಕೃಷಿ ನಿರ್ದೇಸಕರು, ಅರಕಲಗೂಡು ತಾಲ್ಲೂಕಿನ ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರತರಾಗಿರುವ ಅಧಿಕಾರಿ / ನೌಕರರ ತ:ಖ್ತೆ

| ಕ್ರ.ಸಂ. | ಹುದ್ದೆ | ಹೆಸರು |
|---|---|---|
| **ರೈತ ಸಂಪರ್ಕ ಕೇಂದ್ರ (ಕಸಬಾ)** | | |
| 1. | ಕೃಷಿ ಅಧಿಕಾರಿ - 1 | ಕೆ.ಜಿ. ಕವಿತ |
| 2. | ಸಹಾಯಕ ಕೃಷಿ ಅಧಿಕಾರಿ - 2 | ಕೆ.ಟಿ. ಭಾಸ್ಕರ್ |
| | | ಖಾಲಿ |
| 3. | ಕೃಷಿ ಸಹಾಯಕ - 2 | ಖಾಲಿ |
| | | ಖಾಲಿ |
| **ರೈತ ಸಂಪರ್ಕ ಕೇಂದ್ರ (ಮಲ್ಲಿಪಟ್ಟಣ)** | | |
| 1. | ಕೃಷಿ ಅಧಿಕಾರಿ - 1 | ಖಾಲಿ |
| 2. | ಸಹಾಯಕ ಕೃಷಿ ಅಧಿಕಾರಿ - 1 | ವೈ.ಎಸ್. ನಟರಾಜ್ |
| 3. | ಕೃಷಿ ಸಹಾಯಕ - 1 | ಖಾಲಿ |
| **ರೈತ ಸಂಪರ್ಕ ಕೇಂದ್ರ (ದೊಡ್ಡಮಗ್ಗೆ)** | | |
| 1. | ಕೃಷಿ ಅಧಿಕಾರಿ - 1 | ಎ.ಎಲ್. ಸಿದ್ದಲಿಂಗಯ್ಯ |
| 2. | ಕೃಷಿ ಸಹಾಯಕ - 2 | ಸಿ.ಆರ್. ರಾಮೇಗೌಡ |
| | | ಖಾಲಿ |
| **ರೈತ ಸಂಪರ್ಕ ಕೇಂದ್ರ (ಕೊಣನೂರು)** | | |
| 1. | ಕೃಷಿ ಅಧಿಕಾರಿ - 1 | ಖಾಲಿ |
| 2. | ಕೃಷಿ ಸಹಾಯಕ - 2 | ಇಮ್ತಿಯಾಜ್ |
| | | ಖಾಲಿ |
| **ರೈತ ಸಂಪರ್ಕ ಕೇಂದ್ರ (ರಾಮನಾಥಪುರ)** | | |
| 1. | ಕೃಷಿ ಅಧಿಕಾರಿ - 1 | ಖಾಲಿ |
| 2. | ಸಹಾಯಕ ಕೃಷಿ ಅಧಿಕಾರಿ - 2 | ಜಿ.ಕೆ. ಲೋಕೇಶ್ |
| | | ಖಾಲಿ |
| 3. | ಕೃಷಿ ಸಹಾಯಕ - 2 | ಕೆ.ಪಿ. ರಾಜಣ್ಣ |
| | | ಖಾಲಿ |

ಸ.ಕೃ.ನಿ. ಅರಕಲಗೂಡು

## ಅಧಿಕಾರಿ / ನೌಕರರರು ಪಡೆಯುತ್ತಿರುವ ಮಾಸಿಕ ವೇತನ (ನಿಯಮಾನುಸಾರ ನೀಡುತ್ತಿರುವ ರಿಯಾಯಿತಿ ಸವಲತ್ತುಗಳನ್ನೊಳಗೊಂಡಂತೆ)

| ಕ್ರ.ಸಂ. | ಹುದ್ದೆ | ಹೆಸರು (ಶ್ರೀಯುತರು / ಶ್ರೀಮತಿ) | ವೇತನ ಶ್ರೇಣಿ | ಮೂಲ ವೇತನ |
|---|---|---|---|---|
| 1. | ಸಹಾಯಕ ಕೃಷಿ ನಿರ್ದೇಶಕರು-1 | ಕೆ.ಆರ್. ಶ್ರೀವಾಸ್ | 14050-25050 | 23250/- |
| 2. | ಕೃಷಿ ಅಧಿಕಾರಿಗಳು - 2 | ಖಾಲಿ | 11400-21600 | |
| | | ಖಾಲಿ | 11400-21600 | |
| 3. | ಅಧೀಕ್ಷಕರು - 1 | ಐ.ಎ. ಇಂದಿರಾಮಣಿ | 10000-18150 | 14050/- |
| 4. | ಪ್ರಥಮ ದರ್ಜೆ ಸಹಾಯಕರು - 1 | ಬಿ.ಆರ್. ಮಂಜುನಾಥ್ | 8000-14800 | 10800/- |
| 5. | ದ್ವಿತೀಯ ದರ್ಜೆ ಸಹಾಯಕರು - 2 | ಸುಧಾ | 5800-10500 | 6950/- |
| | | ಎನ್.ಎಂ. ಮಂಜುನಾಥ | 5800-10500 | 6125/- |
| 6. | ಬೆರಳಚ್ಚುಗಾರರು - 1 | ದಾಕ್ಷಾಯಿಣಿ | 5800-10500 | 7450/- |
| 7. | ವಾಹನಚಾಲರಕರು - 1 | ಮಹಮ್ಮದ್ ಇಸ್ಮಾಯಿಲ್ | 7275-13350 | 11400/- |
| 8. | ಗ್ರೂಪ್ ಡಿ ನೌಕರರು - 3 | ಜೆ.ಬಿ. ರಂಗಸ್ವಾಮಿ | 5500-9500 | 8600/- |
| | | ಎಂ.ಆರ್. ರಾಮಚಂದ್ರ | 5500-9500 | 8200/- |
| | | ಸಣ್ಣಮ್ಮ | 5500-9500 | 7800/- |

ಮುಂದುವರೆದಿದೆ.,

ಸ.ಕೃ.ನಿ. ಅರಕಲಗೂಡು

## ಸಹಾಯಕ ಕೃಷಿ ನಿರ್ದೇಸಕರು, ಅರಕಲಗೂಡು ತಾಲ್ಲೂಕಿನ ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರತರಾಗಿರುವ ಅಧಿಕಾರಿ / ನೌಕರರು ಪಡೆಯುತ್ತಿರುವ ಮಾಸಿಕ ವೇತನ (ನಿಯಮಾನುಸಾರ ನೀಡುತ್ತಿರುವ ರಿಯಾಯಿ ಸವಲತ್ತು ಒಳಗೊಂಡಂತೆ)

| ಕ್ರ.ಸಂ. | ಹುದ್ದೆ | ಹೆಸರು | ವೇತನ ಶ್ರೇಣಿ | ಮೂಲವೇತನ |
|---|---|---|---|---|
| **ರೈತ ಸಂಪರ್ಕ ಕೇಂದ್ರ (ಕಸಬಾ)** | | | | |
| 1. | ಕೃಷಿ ಅಧಿಕಾರಿ - 1 | ಕೆ.ಜಿ. ಕವಿತ | 11400-21600 | 14050/- |
| 2. | ಸಹಾಯಕ ಕೃಷಿ ಅಧಿಕಾರಿ - 2 | ಕೆ.ಟಿ. ಭಾಸ್ಕರ್ | 10800-20025 | 14050/- |
| | | ಖಾಲಿ | 10800-20025 | |
| 3. | ಕೃಷಿ ಸಹಾಯಕ - 2 | ಖಾಲಿ | 8000-14800 | |
| | | ಖಾಲಿ | 8000-14800 | |
| **ರೈತ ಸಂಪರ್ಕ ಕೇಂದ್ರ (ಮಲ್ಲಿಪಟ್ಟಣ)** | | | | |
| 1. | ಕೃಷಿ ಅಧಿಕಾರಿ - 1 | ಖಾಲಿ | 11400-21600 | |
| 2. | ಸಹಾಯಕ ಕೃಷಿ ಅಧಿಕಾರಿ - 1 | ವೈ.ಎಸ್. ನಟರಾಜ್ | 10800-20025 | 11100/- |
| 3. | ಕೃಷಿ ಸಹಾಯಕ - 1 | ಖಾಲಿ | 8000-14800 | |
| **ರೈತ ಸಂಪರ್ಕ ಕೇಂದ್ರ (ದೊಡ್ಡಮಗ್ಗೆ)** | | | | |
| 1. | ಕೃಷಿ ಅಧಿಕಾರಿ - 1 | ಎ.ಎಲ್. ಸಿದ್ದಲಿಂಗಯ್ಯ | 11400-21600 | 12000/- |
| 2. | ಕೃಷಿ ಸಹಾಯಕ - 2 | ಸಿ.ಆರ್. ರಾಮೇಗೌಡ | 8000-14800 | 10250/- |
| | | ಖಾಲಿ | 8000-14800 | |
| **ರೈತ ಸಂಪರ್ಕ ಕೇಂದ್ರ (ಕೊಣನೂರು)** | | | | |
| 1. | ಕೃಷಿ ಅಧಿಕಾರಿ - 1 | ಖಾಲಿ | 11400-21600 | |
| 2. | ಕೃಷಿ ಸಹಾಯಕ - 2 | ಇಮ್ತಿಯಾಜ್ | 8000-14800 | 10250/- |
| | | ಖಾಲಿ | 8000-14800 | |
| **ರೈತ ಸಂಪರ್ಕ ಕೇಂದ್ರ (ರಾಮನಾಥಪುರ)** | | | | |
| 1. | ಕೃಷಿ ಅಧಿಕಾರಿ - 1 | ಖಾಲಿ | 11400-21600 | |
| 2. | ಸಹಾಯಕ ಕೃಷಿ ಅಧಿಕಾರಿ - 2 | ಜಿ.ಕೆ. ಲೋಕೇಶ್ | 10800-20025 | 11100/- |
| | | ಖಾಲಿ | 10800-20025 | |
| 3. | ಕೃಷಿ ಸಹಾಯಕ - 2 | ಕೆ.ಪಿ. ರಾಜಣ್ಣ | 8000-14800 | 12000/- |
| | | ಖಾಲಿ | 8000-14800 | |

ಸ.ಕೃ.ನಿ. ಅರಕಲಗೂಡು

ಸ.ಕೃ.ನಿ. ಅರಕಲಗೂಡು

# ಕಾದಿರಿಸಿದ ಅನುದಾನ, ನಿರೀಕ್ಷಿತ ವೆಚ್ಚ ವಿವರ 2010-11 ಒಟ್ಟು ತಾಲ್ಲೂಕಿಗೆ ಸಂಬಂಧಿಸಿದೆ.

| ಕ್ರ.ಸಂ. | ಲೆಕ್ಕಶೀರ್ಷಿಕೆ | ಅನುದಾನ | ಆಗಬಹುದಾದ ಖರ್ಚು |
|---|---|---|---|
| 1 | ಒಟ್ಟು ರಾಜ್ಯವಲಯ ಯೋಜನೆ ಕಾರ್ಯಕ್ರಮ | 11120533 | 11120533 |
| 2 | ಒಟ್ಟು ಜಿಲ್ಲಾವಲಯ ಯೋಜನೆ ಕಾರ್ಯಕ್ರಮ | 2137990 | 2137990 |
| 3 | ಒಟ್ಟು ತಾಲ್ಲೂಕು ಪಂಚಾಯಿತಿ ಕೇಂದ್ರ ಪುರಸ್ಕೃತ ಯೋಜನೆ ಕಾರ್ಯಕ್ರಮ | 166000 | 166000 |
| 4 | ಒಟ್ಟು ಜಿಲ್ಲಾ ಪಂಚಾಯಿತಿ ಕೇಂದ್ರ ಪುರಸ್ಕೃತ ಯೋಜನೆ ಕಾರ್ಯಕ್ರಮ | 280500 | 280500 |
| 5 | ವಿಶೇಷ ಘಟಕ ಯೋಜನೆ ಜಿಲ್ಲಾ ಪಂಚಾಯಿತಿ ಯೋಜನೇತರ :- | -- | -- |
| 1 | ಒಟ್ಟು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮ (ವೇತನ, ಕಛೇರಿವೆಚ್ಚ, ಪ್ರಯಾಣಭತ್ಯೆ) | 2729000 | 2729000=00 |
| 2 | ಒಟ್ಟು ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮ (ವೇತನ, ಕಛೇರಿ ವೆಚ್ಚ, ಪ್ರಯಾಣಭತ್ಯೆ) | 1326000 | 1326000=00 |

ಸ.ಕೃ.ನಿ. ಅರಕಲಗೂಡು

# ಸಹಾಯಧನ ಕಾರ್ಯಕ್ರಮಗಳ ಅನುಷ್ಟಾನ ರೀತಿ ಒಟ್ಟು ಸಹಾಯಧನದ ಮೊತ್ತ ಹಾಗೂ ಫಲಾನುಭವಿಗಳ ವಿವರ.

ಗ್ರಾಮ ಪಂಚಾಯತಿ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ನಡೆದು ಇಲಾಖಾ ಮಾರ್ಗಸೂಚಿ ಪ್ರಕಾರ ಫಲಾನುಭವಿಗಳಿಗೆ , ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಮತ್ತು ರೈತ ಸಂಪರ್ಕ ಕೇಂದ್ರಗಳಲ್ಲಿ ಸೌಲಭ್ಯ ನೀಡಲಾಗುತ್ತಿದೆ.

ಸ.ಕೃ.ನಿ. ಅರಕಲಗೂಡು

# 2010-11 ನೇ ಸಾಲಿನ ಸಹಾಯಧನ ನೀಡಿಕೆ ಕಾರ್ಯಕ್ರಮದ ವಿವರ

| ಕ್ರ. ಸಂ. | ಯೋಜನೆ | ವಿವರ | ಭೌತಿಕ | ಆಗಬಹುದಾದ ಖರ್ಚು (ರೂ.) |
|---|---|---|---|---|
| **ತಾಲ್ಲೂಕು ಪಂಚಾಯಿತಿ ಯೋಜನೆಗಳು** | | | | |
| 1 | 2401-00-107-0-51 ಸಸ್ಯ ಸಂರಕ್ಷಣಾ ಯೋಜನೆ | ಸಸ್ಯ ಸಂರಕ್ಷಣಾ ಪೀಡೆನಾಶಕಗಳ ವಿತರಣೆ (500/ಹೆ) | 400 | 100000 |
| | | ಸಸ್ಯ ಸಂರಕ್ಷಣಾ ಉಪಕರಣಗಳ ವಿತರಣೆ (800/1ಕ್ಕೆ) | 90 | 50000 |
| | | **ಒಟ್ಟು** | **490** | **150000** |
| 2 | 2401-00-109-0-71 ಕೃಷಿಮೇಳ & ವಸ್ತುಪ್ರದರ್ಶನ | ಕೃಷಿ ಮೇಳ ಮತ್ತು ವಸ್ತು ಪ್ರದರ್ಶನ ಏರ್ಪಡಿಸುವುದು | 1 | 15000 |
| | | **ಒಟ್ಟು** | **1** | **15000** |
| **ಜಿಲ್ಲಾವಲಯ ಯೋಜನೆಗಳು** | | | | |
| 1 | 2401-00-114-0-01 ಐಸೋಪಾಮ್ - ಮುಸುಕಿನ ಜೋಳದ ಕಾರ್ಯಕ್ರಮ | 1. ದೊಡ್ಡ ಪ್ರಮಾಣದ ಪ್ರಾತ್ಯಕ್ಷತೆ (4000/ಹೆ) | 4 | 16000 |
| | | 2. ಬೆಳೆ ವೈವಿಧ್ಯತೆ ಪ್ರಾತ್ಯಕ್ಷತೆ (4000/ಹೆ) | 3 | 12000 |
| | | 3. ಕೃಷಿ ಉಪಕರಣ ವಿತರಣೆ (2500/1ಕ್ಕೆ) | 23 | 7500 |
| | | 4. ಪಿ.ಎಸ್.ಬಿ. ರೈಜೋಬಿಯಂ (100/ಹೆ) | 100 | 7000 |
| | | 5. ಸಸ್ಯ ಸಂರಕ್ಷಣಾ ಉಪಕರಣ (800/1ಕ್ಕೆ) | 15 | 12000 |
| | | 6. ಲಘು ಪೋಷಕಾಂಶ ವಿತರಣೆ (500/ಹೆ) | 10 | 1000 |
| | | 7. ನೀರು ಪೂರೈಸಲು ಪೈಪು (ಗರಿಷ್ಟ 15000) | 1 | 15000 |
| | | **ಒಒಟ್ಟು** | **156** | **70500** |
| 2 | 2401-00-114-0-01 ಓ.ಪಿ.ಪಿ ಐಸೋಪಾಮ್ - ಎಣ್ಣೆಕಾಳು ಕಾರ್ಯಕ್ರಮ | 1. ದೊ.ಪ್ರ.ಪ್ರಾ - ನೆಲಗಡಲೆ (4000/ಹೆ) | 10 | 22000 |
| | | 2. ಐ.ಪಿ.ಎಂ. ಜೈ.ತೀ.ಪ್ರಾ - ನೆಲಗಡಲೆ (ರೂ. 1627.50/ಹೆ) | 1 | 2000 |
| | | 3. ಕೃಷಿ ಉಪಕರಣ ವಿತರಣೆ (2500/1ಕ್ಕೆ) | 50 | 30000 |
| | | 4. ಪಿ.ಎಸ್.ಬಿ. / ರೈಜೋಬಿಯಂ (ರೂ.100/ಹೆ) | 40 | 2500 |
| | | 5. ಜಿಪ್ಸಂ / ಪೈರೇಟ್ಸ್ ವಿತರಣೆ (750/ಹೆ) | 50 | 11000 |
| | | 6. ಸಸ್ಯ ಸಂರಕ್ಷಣಾಔಷಧಿ ವಿತರಣೆ (ರೂ.500/ಹೆ) | 60 | 12500 |
| | | 7. ಸ.ಸಂ. ಉಪಕರಣ (ರೂ. 800/1ಕ್ಕೆ) | 40 | 32000 |
| | | 8. ಲಘು ಪೋಷಕಾಂಶ ವಿತರಣೆ (500/ಹೆ) | 170 | 38000 |
| | | 9. ಬೀಜ ಗ್ರಾಮ (1000/ಕ್ವಿಂ) | 50 | 50000 |
| | | 10. ಪ್ರಮಾಣಿ ಬೀಜ ವಿತರಣೆ (ರೂ. 1200/ಕ್ವಿಂ) | 48.3 | 58000 |
| | | 11. ಎನ್.ಪಿ.ವಿ. ವಿತರತಣೆ (250 / ಹೆ) | 12 | 3000 |

ಸ.ಕೃ.ನಿ. ಅರಕಲಗೂಡು

| | | | | |
|---|---|---|---|---|
| | | **ಒಟ್ಟು** | **531.3** | **261000** |
| 3 | 2401-00-108-1-14<br>ಲಘು ನೀರಾವರಿ ಘಟಕಗಳ ವಿತರಣೆ | 1. ತುಂತುರು ನೀರಾವರಿ ಘಟಕ (7875/ಹೆ) | 35 | 250000 |
| | | 2. ಹನಿ ನೀರಾವರಿ ಘಟಕ (11813 / ಹೆ) | 3 | 52290 |
| | | **ಒಟ್ಟು** | **38** | **302290** |

| | | | | |
|---|---|---|---|---|
| 4 | 2401-00-109-0-21<br>ಸಸ್ಯ ಚಿಕಿತ್ಸಾಲಯಗಳ ಕಾರ್ಯಕ್ರಮ | 1. ಕಟ್ಟಡ ವೆಚ್ಚಗಳು | 0 | 30000 |
| | | 2. ನಿರ್ವಹಣಾ ವೆಚ್ಚ | 5 | 30000 |
| | | 3. ಪ್ರಾತ್ಯಕ್ಷತೆ : ಸಾಧನಾ ಸಾಮಗ್ರಿಗಳು | 10 | 5000 |
| | | **ಒಟ್ಟು** | **15** | **65000** |
| 5 | 2401-00-800-1-43<br>ಸಾವಯುವಗೊಬ್ಬರ ಯೋಜನೆ | 1. ಅಗ್ರಿಗೋಲ್ಡ್ ವಿತರಣೆ (2550 / ಟನ್) | 20 | 51000 |
| | | 2. ಎರೆಹುಳು ಗೊಬ್ಬರ ವಿತರಣೆ (2290 / ಟನ್) | 5.9 | 13700 |
| | | **ಒಟ್ಟು** | **25.9** | **64700** |
| 6 | 2401-00-800-1-40<br>ಕುಯಿಲು ಕಟಾವು ತಂತ್ರಜ್ಞಾನ | **1. ಟಾರ್ಪಾಲ್ / ಪ್ಲಾಸ್ಟಿಕ್ ಹಾಳೆ ವಿತರಣೆ (500/1ಕ್ಕೆ)** | **160** | **80000** |
| 7 | 2401-00-800-1-32<br>ಪೂರಕವಾಗಿ 2401-00-800-1-40<br>ಕೃಷಿ ಯಾಂತ್ರೀಕರಣ | 1. ಟಿಲ್ಲರ್ ವಿತರಣೆ (ಶೇ.40/ಗರಿಷ್ಟ 45000) | 13 | 585000 |
| | | 2. ಸ್ವಯಂಚಾಲಿತ ರೀಪರ್ ಭತ್ತ ನಾಟಿ ಮಾಡುವ ಯಂತ್ರಗಳು (ಶೇ.25 / ರೂ. 40000) | 6 | 240000 |
| | | 3. ಶಕ್ತಿಚಾಲಿತ ವಿಶೇಷ ಯಂತ್ರಗಳು (ಶೇ. 40 / ಗರಿಷ್ಟ ರೂ. 20000) | 1 | 20000 |
| | | 4. ಟ್ರಾಕ್ಟರ್ ಚಾಲಿತ ಸ.ಸಂ.ಉಪಕರಣ (ಶೇ. 25 / ಗರಿಷ್ಟ ರೂ. 4000) | 1 | 4000 |
| | | 5. ಒಕ್ಕಣೆ ಕಣ ಯಂತ್ರಗಳು (ಶೇ. 25 / ಗರಿಷ್ಟ ರೂ. 12000) | 1 | 12000 |
| | | 6. ಡೀಸೆಲ್ ಪಂಪ್‌ಸೆಟ್ (ಶೇ. 25 / ಗರಿಷ್ಟ10000) | 1 | 10000 |
| | | **ಒಟ್ಟು** | **23** | **871000** |
| 8 | 2401-00-800-1-40<br>ಪೂರಕವಾಗಿ 2401-00-800-1-32<br>ಕೃಷಿ ಯಾಂತ್ರೀಕರಣ | 1. ಟಿಲ್ಲರ್ ವಿತರಣೆ (ರೂ. 5000) | 13 | 65000 |
| | | 2. ಸ್ವಯಂಚಾಲಿತ ರೀಪರ್ ಭತ್ತ ನಾಟಿ ಮಾಡುವ ಯಂತ್ರಗಳು (ಶೇ. 25 / ರೂ. 40000) | 4 | 160000 |
| | | 3. ಶಕ್ತಿಚಾಲಿತ ವಿಶೇಷ ಯಂತ್ರಗಳು (ಶೇ. 40 / ಗರಿಷ್ಟ ರೂ. 10000) | 1 | 10000 |
| | | **ಒಟ್ಟು** | **18** | **235000** |

ಸ.ಕೃ.ನಿ. ಅರಕಲಗೂಡು

| ರಾಜ್ಯವಲಯ ಯೋಜನೆಗಳು | | | | |
|---|---|---|---|---|
| 1 | 2401-00-001-1-01<br>ಕೃಷಿ ನಿರ್ದೇಶನಾಲಯ (ಪ್ಲಾನ್)<br>ಒ | 1. ತೆರಿಗೆ ಮತ್ತು ಶುಲ್ಕಗಳ ಸಂದಾಯವೆಚ್ಚ (071) | 0 | 3000 |
| | | 2. ಪಾಕ್ಷಿಕ ತರಬೇತಿಗಳು | 24 | 2400 |
| | | ಒಟ್ಟು | **24** | **5400** |
| 2 | 2401-00-107-0-03<br>ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆ | 1. ಜೈವಿಕ ಪೀಡೆನಾಶಕಗಳು (500/ಹೆ) | 175 | 17500 |
| | | 2. ಧಾನ್ಯ ಸಂಗ್ರಹಣಾ ಪೆಟ್ಟಿಗೆ ವಿತರಣೆ (750/1ಕ್ಕೆ) | 12 | 3750 |
| | | 3. ಗುಣನಿಯಂತ್ರಣ ಕಾರ್ಯಕ್ರಮ | | 4000 |
| | | ಒಟ್ಟು | **187** | **25250** |

| | | | | |
|---|---|---|---|---|
| 3 | 2401-00-800-1-40<br>ಸಲಹೆ ಮತ್ತು ಸಮಿತಿ ಯೋಜನೆ | 1. ಸಲಹೆ ಮತ್ತು ಸಮಿತಿ ಯೋಜನೆ | 1 | 3000 |
| | | 2. ಕೃಷಿ ಪ್ರಶಸ್ತಿ | 3 | 18000 |
| | | ಒಟ್ಟು | **4** | **21000** |
| 4 | 2401-00-800-1-43<br>ಸಾವಯವ ಗ್ರಾಮ (ತಾಲ್ಲೂಕು ಮಟ್ಟ) | **ಸಾವಯವ ಗ್ರಾಮ (ತಾಲ್ಲೂಕು ಮಟ್ಟ)** | **1** | **506714** |
| 5 | 2401-00-800-1-44(422)<br>ವಿ.ಘ.ಯೋ.<br>ಕೃಷಿ ಯಾಂತ್ರೀಕರಣ | 1. ಪವರ್‌ಟಿಲ್ಲರ್ (ಶೇ.75 / ರೂ. 75000) | 1 | 75000 |
| | | 2. ನಾಟಿ / ಬಿತ್ತನೆ ಮಾಡುವ ಯಂತ್ರ (ಶೇ.75 ) | 1 | 75000 |
| | | 3. ಸಸ್ಯ ಸಂರಕ್ಷಣಾ ಉಪಕರಣ (ಯಂತ್ರಚಾಲಿತ / ಟಿಲ್ಲರ್‌ಚಾಲಿತ) ಶೇ. 75 / ರೂ.75000 | 1 | 75000 |
| | | 4. ಮಾನವ / ಎತ್ತುಚಾಲಿತ ಉಪಕರಣ (ಶೇ. 75 / 75000) | 257 | 125000 |
| | | 5. ಡೀಸೆಲ್ ಪಂಂಪ್‌ಸೆಟ್ (ಶೇ.75 / 17250) | 1 | 17250 |
| | | ಒಒಟ್ಟು | **261** | **292250** |
| 6 | 2401-00-800-1-44(423)<br>ಕೃಷಿ ಯಾಂತ್ರೀಕರಣ (ಗಿ.ಉ.ಯೋ) | **1. ಮಾನವ / ಎತ್ತುಚಾಲಿತ ಉಪಕರಣ (ಶೇ. 75 / ಗರಿಷ್ಟ 2500)** | **5** | **2500** |
| 7 | 2401-00-800-1-10<br>ವಿಶೇಷ ಘಟಕ ಯೋಜನೆ | 1. ಕೃಷಿ ಪರಿಕರಗಳ ಪೂರೈಕೆ (ಶೇ.100 / ಹೆ. ರೂ. 4000) | 30 | 120000 |
| | | 2. ಆಧುನಿಕ ಕೃಷಿ ಉಪಕರಣಗಳ ಪೂರೈಕೆ (ಶೇ. 75 / ರೂ. 75000) | 2 | 150000 |
| | | 3. ಜಲಾಂತರ್ಗತ ಪಂಪ್‌ಸೆಟ್ಟುಗಳ ಪೂರೈಕೆ (ಶೇ. 75 / 50000) | 1 | 50000 |
| | | 4. ಪವರ್ ಟಿಲ್ಲರ್‌ಗಳ ಪೂರೈಕೆ (ಶೇ. 75 /) | 2 | 150000 |

| | | | | |
|---|---|---|---|---|
| | | 5. ಡೀಸೆಲ್ / ಸೀಮೆಎಣ್ಣೆ ಪಂಪ್‌ಸೆಟ್ (ಶೇ. 75 / ರೂ. 17250) | 4 | 69000 |
| | | 6. ಧಾನ್ಯ ಸಂಗ್ರಹಣಾ ಕಣಜಗಳ ಪೂರೈಕೆ (ಶೇ. 75 ಅಥವಾ ಗರಿಷ್ಟ ರೂ. 2000) | 68 | 30000 |
| | | 7. ತುಂತುರು ನೀರಾವರಿ ಘಟಕಗಳ ವಿತರಣೆ (ಶೇ. 75 ರ ಸಹಾಯಧನ) | 1 | 22000 |
| | | 8. ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣ ವಿತರಣೆ (ಶೇ. 75 ಅಥವಾ ಗರಿಷ್ಟ 2500) | 102 | 50000 |
| | | **ಒಟ್ಟು** | **210** | **491000** |
| 8 | 2401-00-796-1-00 ಗಿರಿಜನ ಉಪಯೋಜನೆ | 1. ಕೃಷಿ ಪರಿಕರಗಳ ಪೂರೈಕೆ (ಶೇ.100/ ಗರಿಷ್ಟ ರೂ. 4000/ಹೆ) | 15 | 60000 |
| | | 2. ಡೀಸೆಲ್ / ಸೀಮೆಎಣ್ಣೆ ಪಂಪ್‌ಸೆಟ್ ಪೂರೈಕೆ (ಶೇ. 75 / ಗರಿಷ್ಟ 17250) | 1 | 17250 |
| | | 3. ಧಾನ್ಯ ಸಂಗ್ರಹಣಾ ಕಣಜಗಳ ಪೂರೈಕೆ (ಶೇ. 75 / ಗರಿಷ್ಟ ರೂ. 2000) | 4 | 6000 |
| | | 4. ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣ ವಿತರಣೆ (ಶೇ. 75 / ಗರಿಷ್ಟ 2500) | 4 | 5000 |
| | | **ಒಟ್ಟು** | **24** | **88250** |

| | | | | |
|---|---|---|---|---|
| 9 | 2401-00-114-0-01 ಎಣ್ಣೆಕಾಳು ಉತ್ಪಾದನೆ ಯೋಜನೆ | 1. ದೊ.ಪ್ರ.ಪ್ರಾ (ನೆಲಗಡಲೆ) (ರೂ.4000/ಹೆ) | 36 | 142000 |
| | | 2. ಜಿಪ್ಸಂ ವಿತರಣೆ (750/ಹೆ) | 1377 | 219000 |
| | | 3. ಲಘು ಪೋಷಕಾಂಶ ವಿತರಣೆ (ರೂ.500/ಹೆ) | 500 | 50000 |
| | | 4. ಸಸ್ಯ ಸಂರಕ್ಷಣಾ ಉಪಕರಣ (ರೂ.800/1ಕ್ಕೆ) | 15 | 12000 |
| | | 5. ಪ್ರಮಾಣಿತ ಬೀಜ ವಿತರಣೆ (1200 / ಕ್ವಿಂ) | 83 | 99600 |
| | | **ಒಟ್ಟು** | **2011** | **522600** |
| 10 | 2401-00-800-1-44 ಪೂರಕವಾಗಿ 2401-00-800-1-32 ಜಿಲ್ಲಾವಲಯ ಕೃಷಿ ಯಾಂತ್ರೀಕರಣ ಯೋಜನೆ | 1. ಒಕ್ಕಣೆ ಯಂತ್ರಗಳು (ಶೇ.25 / ರೂ.12000) | 1 | 45000 |
| | | 2. ಡೀಸೆಲ್ ಪಂಪ್‌ಸೆಟ್ (ಶೇ. 25 / 10000) | 1 | 10000 |
| | | 3. ಟ್ರಾಕ್ಟರ್‌ಚಾಲಿತ ಸ.ಸಂ.ಉಪಕರಣ (ಶೇ. 25 / ರೂ. 4000) | 1 | 25000 |
| | | 4. ಸ್ವಯಂಚಾಲಿತ ರೀಪರ್ / ಭತ್ತ ನಾಟಿ ಮಾಡುವ ಯಂತ್ರಗಳು (ಶೇ. 25 / ರೂ. 40000) | 2 | 80000 |
| | | 5. ಶಕ್ತಿಚಾಲಿತ ವಿಶೇಷ ಯಂತ್ರ (ಶೇ. 40 / ರೂ. 20000) | 1 | 350000 |

ಮಾಹಿತಿ ಹಕ್ಕು ಅಧಿನಿಯಮ 2010-11, ಹಾಸನ ವಿಭಾಗ

| | | | | |
|---|---|---|---|---|
| | | **ಒಟ್ಟು** | **6** | **510000** |
| 11 | 2401-00-800-1-44<br>ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರುಕಟ್ಟೆ ಸಂಪರ್ಕ ಯೋಜನೆ | 1. ಒಕ್ಕಣೆ ಕಣ ನಿರ್ಮಾಣ (ವೈಯುಕ್ತಿಕ / 25000 ಸಮುದಾಯ / 50000) | **2** | **100000** |
| | | 2. ಕೃಷಿ ಸಂಸ್ಕರಣಾ ಘಟಕಗಳ ಸ್ಥಾಪನೆ (ಶೇ. 50 / ರೂ. 50000 / ಒಂದಕ್ಕೆ) | **2** | **100000** |
| | | **ಒಟ್ಟು** | **4** | **200000** |
| 12 | 2401-00-800-1-44(422)<br>ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರುಕಟ್ಟೆ ಸಂಪರ್ಕ ಯೋಜನೆ (ವಿ.ಘ.ಯೋ) | 1. ಒಕ್ಕಣೆ ಕಣ ನಿರ್ಮಾಣ (ಶೇ. 75 / 75000 ಸಮುದಾಯ ಕಣ) (37500 / ವೈಯುಕ್ತಿಕ ಕಣ) | 1 | 75000 |
| | | 2. ಕೃಷಿ ಸಂಸ್ಕರಣಾ ಘಟಕಗಳ ವಿತರಣೆ (ಶೇ. 75, ಗರಿಷ್ಟ ರೂ. 75000/- ಪ್ರತಿ ಘಟಕಕ್ಕೆ) | 1 | 75000 |
| | | **ಒಟ್ಟು** | **2** | **150000** |
| 13 | 2401-00-800-1-58 ಪ್ಲಾನ್ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಣ್ಣಿನ ಸತ್ವ ಹೆಚ್ಚಿಸುವಿಕೆ ಕಾರ್ಯಕ್ರಮ | 1. ಸಮಗ್ರ ಕೃಷಿ ಪದ್ಧತಿ / 50000 | 1 | 50000 |
| | | 2. ದೊಡ್ಡ ಪ್ರಮಾಣದ ಪ್ರಾತ್ಯಕ್ಷತೆ (40000/5ಹೆ) | 25 | 200000 |
| | | 3. ಜಿಪ್ಸಂ / ಕೃಷಿ ಸುಣ್ಣ ವಿತರಣೆ / 750 | 105 | 79000 |
| | | 4. ಹಸಿರೆಲೆ ಬೀಜಗಳ ವಿತರಣೆ (ರೂ. 45 /ಕೆ.ಜಿ) | 25 | 56250 |
| | | 5. ಲಘು ಪೋಷಕಾಂಶಗಳ ವಿತರಣೆ / 500 | 488 | 244000 |
| | | 6. ಜೈವಿಕ ಗೊಬ್ಬರ ವಿತರಣೆ / 100 | 233 | 23000 |
| | | 7. ಬಯೋಡೈಜೆಸ್ಟರ್ | 9 | 270000 |
| | | 8. ಎರೆಹುಳುಗೊಬ್ಬರ | 5 | 20000 |
| | | **ಒಟ್ಟು** | **891** | **698250** |

| | | | | |
|---|---|---|---|---|
| 14 | 2401-00-800-1-57<br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಕೃಷಿ ಯಾಂತ್ರೀಕರಣ ಮಿಷನ್ | 1. ಪವರ್‌ಟಿಲ್ಲರ್ | 24 | 1200000 |
| | | 2. ಹೈಟೆಕ್ ಕೃಷಿ ಯಂತ್ರೋಪಕರಣಗಳು | 9 | 630000 |
| | | 3. ಡೀಸೆಲ್ ಪಂಪ್‌ಸೆಟ್ | 1 | 20000 |
| | | 4. ಕೃಷಿ ಸಂಸ್ಕರಣಾ ಘಟಕಗಳು | 8 | 520000 |
| | | **ಒಟ್ಟು** | **42** | **2370000** |
| 15 | 2401-00-800-1-57<br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 1. ಜಿಪ್ಸಂ | | } 75000 |
| | | 2. ಲಘುಪೋಷಕಾಂಶ | | |
| | | 3. ಜೈವಿಕ ಪೀಡೆನಾಶಕ | | 7000 |
| | | 4. ಸಸ್ಯ ಸಂರಕ್ಷಣಾ ಔಷಧಿ | | 12500 |
| | | 5. ಪರಿಕರ ಸಂಗ್ರಹಿಸಲು ಗೋದಾಮು ಬಾಡಿಗೆ | | 7500 |

ಸ.ಕೃ.ನಿ. ಅರಕಲಗೂಡು

| | | | | |
|---|---|---|---|---|
| | | **ಒಟ್ಟು** | | **102000** |
| 16 | 2401-00-800-3-06 | 1. ಸಾಮಾನ್ಯ | | 985875 |
| | | 2. ಎಸ್.ಸಿ.ಪಿ | | 126358 |
| | | 3. ಟಿ.ಎಸ್.ಪಿ | | 28900 |
| | | **ಒಟ್ಟು** | | **1135133** |
| 17 | ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ (ಭತ್ತ) | 1. ಸುಧಾರಿತ ಬೇಸಾಯ ಪದ್ಧತಿಗಳ ಪ್ರಾ. (ಪ್ರತಿ 0.4 ಹೆ.ಗೆ. ರೂ. 2500) | 25 | 62500 |
| | | 2. ಶ್ರೀಪದ್ಧತಿಯಲ್ಲಿ ಭತ್ತದ ಪ್ರಾತ್ಯಕ್ಷತೆ (ಪ್ರತಿ 0.4 ಹೆ.ಗೆ) ರೂ. 3000 | 18 | 54000 |
| | | 3. ಸಂಕರಣಾ ಭತ್ತದ ಉತ್ಪಾದನಾ ತಾಂತ್ರಿಕತೆಯ ಪ್ರಾತ್ಯಕ್ಷತೆ (ಪ್ರತಿ 0.4 ಹೆ.ಗೆ ರೂ. 3000) | 16 | 48000 |
| | | 4. ಸಂಕರಣಾ ಭತ್ತದ ಬೀಜಗಳನ್ನು ಉತ್ಪಾದಿಸುವಲ್ಲಿ ಸ.ಧನ. ವಿತರಣೆ 1000/ಕ್ವಿ | 65 | 65000 |
| | | 5. ಸಂಕರಣಾ ಭತ್ತದ ಬೀಜಗಳನ್ನು ವಿತರಿಸುವಲ್ಲಿ ಸ.ಧನ. ವಿತರಣೆ 2000 / ಕ್ವಿ | 25 | 50000 |
| | | 6. ಅಧಿಕ ಇಳುವರಿ ಭತ್ತದ ತಳಿಗಳ ಬೀಜ ವಿತರಣೆಗೆ ಸ.ಧನ ವಿತರಣೆ ರೂ.500 / ಕ್ವಿ | 2000 | 100000 |
| | | 7. ಲಘು ಪೋಷಕಾಂಶಗಳ ವಿತರಣೆಗೆ (500/ಹೆ) | 350 | 175000 |
| | | 8. ಕೃಷಿ ಸುಣ್ಣವನ್ನು ವಿತರಿಸುವಲ್ಲಿ (500/ಹೆ) | 300 | 150000 |
| | | 9. ಸಸ್ಯ ಸಂರಕ್ಷಣಾ ಔಷಧಿ ಮತ್ತು ಜೈವಿಕ ಪೀಡೆನಾಶಕಗಳು (ರೂ. 500/ಹೆ) | 900 | 450000 |
| | | 10. ಕೋನೋವೀಡರ್ ಹಾಗೂ ಇತರೆ ಕೃಷಿ ಉಪಕರಣ ವಿತರಿಸುವಲ್ಲಿ ಸ.ಧನ 3000/1ಕ್ಕೆ | 89 | 267000 |
| | | 11. ನ್ಯಾಪ್‌ಸ್ಯಾಕ್ ಸ್ಪ್ರೇಯರ್ ವಿತರಣೆಗೆ (ರೂ. 3000 / ಒಂದಕ್ಕೆ) | 16 | 48000 |
| | | 12. ಜೀರೋ ಸೀಡ್ ಡ್ರಿಲ್ ಉಪಕರಣ (ರೂ. 15000 / ಉಪಕರಣಕ್ಕೆ) | 1 | 15000 |

ಸ.ಕೃ.ನಿ. ಅರಕಲಗೂಡು

| | | | | |
|---|---|---|---|---|
| | | 13. ಬಹುಬೆಳೆ ನಾಟಿ ಯಂತ್ರ ವಿತರಣೆ ಸ.ಧನ (ರೂ. 15000 ಸ.ಧನ) | 1 | 15000 |
| | | 14. ಪವರ್ ವೀಡರ್‌ಗಳ ವಿತರಣೆ (ರೂ. 15000/ ಉಪಕರಣ) | 15 | 225000 |
| | | 15. ಪಂಪ್‌ಸೆಟ್‌ಗಳ ವಿತರಣೆಗೆ ಸಹಾಯಧನ (ರೂ.10000/ಉಪಕರಣಕ್ಕೆ) | 35 | 350000 |
| | | 16. ಎಫ್.ಎಫ್.ಎಸ್. ಮಾದರಿಯಲ್ಲಿ ತರಬೇತಿ ನೀಡುವಿಕೆ ರೂ. 17000 / ತರಬೇತಿಗೆ | 3 | 51000 |
| | | **ಒಟ್ಟು** | **3859** | **3025500** |
| 18 | ರಾ.ಆ.ಭ.ಯೋ (ಭತ್ತ) | 1. ಪ್ಲಾಸ್ಟಿಕ್ ಹಾಳೆ / ಟ್ರೈ ಮೇಲೆ ಸಸಿಮಡಿ ತಯಾರಿಕೆ (18750 / ಯು) | 3 | 56250 |
| | | 2. ಸಾಮೂಹಿಕ ಸಿಂಪರಣೆ ಕೈಗೊಳ್ಳಲು ಸಹಾಯಧನ (ರೂ. 700 /- ಹೆ) | 100 | 70000 |
| | | ಒಟ್ಟು | **103** | **126250** |
| 19 | ರಾ.ಆ.ಭ. ಅಭಿಯಾನ (ದ್ವಿದಳ ಧಾನ್ಯ) | 1. ತಾಂತ್ರಿಕ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವಿಕೆ (ರೂ.2000 / ಪ್ರಾ) | 68 | 136000 |
| | | 2. ಪ್ರಮಾಣಿತ ಬೀಜಗಳ ಉತ್ಪಾದನೆ (ರೂ. 1000/ಕ್ವಿಂ) | 90 | 90000 |
| | | 3. ಪ್ರಮಾಣಿತ ಬಿತ್ತನೆ ಬೀಜಗಳ ವಿತರಣೆ (ರೂ. 1200 / ಕ್ವಿಂ) | 315 | 378000 |
| | | 4. ಲೈಮ್ / ಜಿಪ್ಸಂ ವಿತರಣೆ (ರೂ.750 / ಹೆ) | 70 | 52500 |
| | | 5. ಲಘು ಪೋಷಕಾಂಶಗಳ ವಿತರಣೆ (ರೂ. 500 / ಹೆ) | 60 | 30000 |
| | | 6. ರೈಜೋಬಿಯಂ / ಪಿ.ಎಸ್.ಬಿ. ವಿತರಣೆ (ರೂ. 100 / ಹೆ) | 40 | 4000 |
| | | 7. ಸಸ್ಯ ಸಂರಕ್ಷಣಾ ಔಷಧಿ ವಿತರಣೆ (ರೂ.500 / ಹೆ) | 85 | 42500 |
| | | 8. ಸಮಗ್ರ ಪೀಡೆನಾಶಕಗಳ ವಿತರಣೆ (ರೂ. 750 / ಹೆ) | 100 | 75000 |
| | | 9. ನ್ಯಾಪ್‌ಸ್ಯಾಕ್ ಸ್ಪ್ರೇಯರ್‌ಗಳ ವಿತರಣೆ (ರೂ. 3000 / ಸ್ಪ್ರೇಯರ್) | 4 | 12000 |
| | | 10. ತುಂತುರು ನೀರಾವರಿ ಘಟಕಗಳ ವಿತರಣೆ (ರೂ. 7500 / ಹೆ) | 1 | 7500 |

| | | | | |
|---|---|---|---|---|
| | | 11. ಡೀಸೆಲ್ ಪಂಪ್‌ಸೆಟ್ಟುಗಳ ವಿತರಣೆ (ರೂ. 10000 / ಹೆ) | 4 | 40000 |
| | | 12. ನೀರು ಸರಬರಾಜಿಗಾಗಿ ಪೈಪುಗಳ ವಿತರಣೆ (ರೂ. 15000 / ಪೈಪು) | 3 | 45000 |
| | | ಒಟ್ಟು | **840** | **912500** |
| 20 | ವಿಶೇಷ ಅಬಿವೃದ್ಧಿ ಯೋಜನೆ 2401-00-800-158 (059) ಸಾಮಾನ್ಯ | 1. ಪಿ.ಎಸ್.ಬಿ. ವಿತರಣೆ | 110 | 9900 |
| | | 2. ಎರೆಹುಳು ಘಟಕ | 17 | 68000 |
| | | ಒಟ್ಟು | **118** | **77900** |
| 21 | ಸಾವಯವ ಕೃಷಿ ಯೋಜನೆ 2401-00-800-1-43 | 1. ಪ್ರಾಥಮಿಕ ಸಮೀಕ್ಷೆ | | **30000** |
| | | 2. ಆಡಳಿತ ಮತ್ತು ಸೇವಾವೆಚ್ಚ | | **64000** |
| | | 3. ಕ್ರಿಯಾ ಯೋಜನೆ | | **152000** |
| | | ಒಟ್ಟು | | **248000** |
| 22 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 2401-00-800-1-57(133) | **1. ಟಾರ್ಪಾಲಿನ್ ವಿತರಣೆ (8ಮೀ * 6ಮೀ)** | **100** | **110000** |

ಸ.ಕೃ.ನಿ. ಅರಕಲಗೂಡು

# ಮಾಹಿತಿ ಲಭ್ಯತೆ (ಎಲೆಕ್ಟ್ರಾನಿಕ್ ರೂಪದಲ್ಲಿ ಸಂಕ್ಷಿಪ್ತಗೊಳಿಸಿದ ಲಭ್ಯ ವಿವರ)

ಈ ಕಛೇರಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು ಸಿ.ಡಿ. ರೂಪದಲ್ಲಿ ಸಲ್ಲಿಸಲಾಗಿದೆ

ಸ.ಕೃ.ನಿ. ಅರಕಲಗೂಡು

# ನಾಗರೀಕರಿಗೆ ಮಾಹಿತಿ ಲಭ್ಯತೆ ಬಗ್ಗೆ ವಿವರಗಳು

ಸಹಾಯಕ ಕೃಷಿ ನಿರ್ದೇಶಕರು, ಅರಕಲಗೂಡು ಕಛೇರಿಯು ಸರ್ಕಾರವು ನಿಗ ದಿಪಡಿಸಿರುವ ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಕೆಲಸದ ದಿನಗಳಲ್ಲಿ ಬೆಳಿಗ್ಗೆ : 10.00 ರಿಂದ ಸಂಜೆ : 5.30 ರ ವರೆಗೆ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಮಾಹಿತಿ ಪಡೆಯಬಹುದಾಗಿದೆ.

ಸ.ಕೃ.ನಿ. ಅರಕಲಗೂಡು

ಮಾಹಿತಿ ಹಕ್ಕು ಅಧಿನಿಯಮ 2010-11, ಹಾಸನ ವಿಭಾಗ

## ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರ :-

ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005 ರ ಅನ್ವಯ ಸಹಾಯಕ ಕೃಷಿ ನಿರ್ದೇಶಕರು, ಅರಕಲಗೂಡು ಕಛೇರಿಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾದಿಕಾರಿಗಳ ಪಟ್ಟಿ.

| ಕ್ರ. ಸಂ. | ಸಾರ್ವಜನಿಕ ಪ್ರಾಧಿಕಾರ ಕಛೇರಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾದಿಕಾರಿ |
|---|---|---|---|---|
| 1. | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214<br>ಫ್ಯಾಕ್ಸ್ ಸಂ. 220214 | ಕೆ.ಜಿ. ಕವಿತ<br>ತಾಂತ್ರಿಕ ಸಹಾಯಕರು<br>(ಪ್ರಭಾರ)<br>ದೂ.ಸಂ. 220214 | ಐ.ಎ. ಇಂದಿರಾಮಣಿ<br>ಅಧೀಕ್ಷಕರು<br>ದೂ.ಸಂ. 220214 | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214 |
| 2. | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>ಕಸಬಾ | ಕೆ.ಜಿ. ಕವಿತ<br>ಕೃಷಿ ಅಧಿಕಾರಿ<br>ದೂ.ಸಂ. 221664 | ಕೆ.ಟಿ. ಭಾಸ್ಕರ್<br>ಸಹಾಯಕ ಕೃಷಿ ಅಧಿಕಾರಿ<br>ದೂ.ಸಂ. 221664 | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214 |
| 3. | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>ಮಲ್ಲಿಪಟ್ಟಣ | ವೈ.ಎಸ್. ನಟರಾಜ್<br>ಕೃಷಿ ಅಧಿಕಾರಿ<br>(ಪ್ರಭಾರ)<br>ದೂ.ಸಂ. 246571 | ವೈ.ಎಸ್. ನಟರಾಜ್<br>ಸಹಾಯಕ ಕೃಷಿ ಅಧಿಕಾರಿ<br>ದೂ.ಸಂ. 246571 | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214 |
| 4. | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>ದೊಡ್ಡಮಗ್ಗೆ | ಎ.ಎಲ್. ಸಿದ್ದಲಿಂಗ ್ಯಯ್ಯ<br>ಕೃಷಿ ಅಧಿಕಾರಿ<br>ದೂ.ಸಂ. 252880 | ಸಿ.ಆರ್. ರಾಮೇಗೌಡ<br>ಕೃಷಿ ಸಹಾಯಕರು<br>ದೂ.ಸಂ. 252880 | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214 |
| 5. | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>ರಾಮನಾಥಪುರ | ಜಿ.ಕೆ. ಲೋಕೇಶ್<br>ಕೃಷಿ ಅಧಿಕಾರಿ<br>(ಪ್ರಭಾರ)<br>ದೂ.ಸಂ. 225186 | ಕೆ.ಪಿ. ರಾಜಣ್ಣ<br>ಕೃಷಿ ಸಹಾಯಕರು<br>ದೂ.ಸಂ. 221667 | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214 |
| 6. | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>ಕೊಣನೂರು | ಇಮ್ತಿಯಾಜ್<br>ಕೃಷಿ ಅಧಿಕಾರಿ<br>(ಪ್ರಭಾರ)<br>ದೂ.ಸಂ. 236885 | ಇಮ್ತಿಯಾಜ್<br>ಕೃಷಿ ಸಹಾಯಕರು<br>ದೂ.ಸಂ. 236885 | ಸಹಾಯಕ ಕೃಷಿ ನಿರ್ದೇಶಕರು<br>ಅರಕಲಗೂಡು<br>ದೂ.ಸಂ. 220214 |

ಸ.ಕೃ.ನಿ. ಅರಕಲಗೂಡು

## ಇತರೆ ನಿರ್ದಿಷ್ಟಪಡಿಸಲಾದ ಮಾಹಿತಿಗಳು :-

ಎಲ್ಲಾ ಅಧಿಕಾರಿ ನೌಕರರಿಗೆ ನಿಗಧಿಪಡಿಸಿರುವ ಕೇಂದ್ರಸ್ಥಾನದಲ್ಲಿ ಇದ್ದು ರೈತರಿಗೆ ಅಗತ್ಯ ಮಾಹಿತಿ ಹಾಗೂ ಸೌಲಭ್ಯಗಳನ್ನು ಒದಗಿಸುವುದು.

ಸ.ಕೃ.ನಿ. ಅರಕಲಗೂಡು